ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

HASSAN INSTITUTE OF MEDICAL SCIENCES, HASSAN

(An Autonomous Medical Institution, Government of Karnataka )

SRI CHAMARAJENDRA HOSPITAL CAMPUS, HASSAN-573201

Website: www.hims-hassan.org, Phone/Fax No.08172-231699/ 231599 , Email: directorhims@yahoo.com

# 11 ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

## ದಿನಾಂಕ: 05-06-2015ನೇ ಶುಕ್ರವಾರ, ಬೆಳಗ್ಗೆ : 11-30ಗಂಟೆಗೆ

:ಸ್ಥಳ:

ಕೊಠಡಿ ಸಂಖ್ಯೆ: 422, 4ನೇ ಮಹಡಿ,

ವಿಕಾಸ ಸೌಧ, ಬೆಂಗಳೂರು.

ಹಾಡಿಹಾಡಿ

ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## HASSAN INSTITUTE OF MEDICAL SCIENCES, HASSAN

(An Autonomous Institute under the Dept of Medical Education, Government of Karnataka)

SRI CHAMARAJENDRA HOSPITAL CAMPUS, HASSAN-573201

Website: www.hims-hassan.org Phone/Fax No.08172-231699 Email:directorhims@yahoo.com

## 11ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 11ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:05–06–2015 ರಂದು ಶುಕ್ರವಾರ ಬೆಳಗ್ಗೆ:11–30 ಗಂಟೆಗೆ ಕೊಠಡಿ ಸಂಖ್ಯೆ:422, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

ಒಟ್ಟು ಸದಸ್ಯರ ಸಂಖ್ಯೆ:10 ಹಾಜರಿದ್ದ ಸದಸ್ಯರ ಸಂಖ್ಯೆ: 08

| | | | |
|---|---|---|---|
| 01 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಕಾಸ ಸೌಧ, ಬೆಂಗಳೂರು. | ಅಧ್ಯಕ್ಷರು | ಹಾಜರಿದ್ದಾರೆ |
| 02 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | – |
| 03 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀದಿ, ಬೆಂಗಳೂರು. | ಸದಸ್ಯರು | ಹಾಜರಿದ್ದಾರೆ |
| 04 | ಮಾನ್ಯ ಸರ್ಕಾರದ ಉಪ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | ಹಾಜರಿದ್ದಾರೆ |
| 05 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿದ್ದಾರೆ |
| 06 | ಮಾನ್ಯ ನಿರ್ದೇಶಕರು/ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿದ್ದಾರೆ |
| 07 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿದ್ದಾರೆ |
| 08 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿದ್ದಾರೆ |

Finance Officer
Hassan Institute of Medical Sciences
Hassan

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| 09 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿದ್ದಾರೆ |
|---|---|---|---|

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 1 | ಸ್ನಾತಕೋತ್ತರ ಪದವಿಗಳ ಕೋರ್ಸ್ ಪ್ರಾರಂಭಿಸಲು ಅವಶ್ಯಕವಾಗಿ ಬೇಕಾದ ಹೆಚ್ಚುವರಿ ಬೋಧಕರ ಹುದ್ದೆಗಳನ್ನು ಸೃಜಿಸಿ ಮಂಜೂರು ಮಾಡಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಅನುಮೋದನೆ ಪಡೆಯುವ ಬಗ್ಗೆ. | ಸಂಸ್ಥೆಯಲ್ಲಿ 10 ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿಗಳ ಕೋರ್ಸ್ ಪ್ರಾರಂಭಿಸಲು ಅವಶ್ಯಕವಾಗಿ ಬೇಕಾದ 38 ಹೆಚ್ಚುವರಿ ಬೋಧಕರ ಹುದ್ದೆಗಳನ್ನು ಸೃಜಿಸಿ ಮಂಜೂರು ಮಾಡಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಅನುಮೋದಿಸಲು ಒಪ್ಪಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲು ಮತ್ತು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು. |
| 2 | 2014–15ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ (SCSP/STSP) ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪರಿಕರಗಳನ್ನು ಖರೀದಿಸುವ ಬಗ್ಗೆ. | 2014–15ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ (SCSP/STSP) ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಪ.ಜಾ/ಪ.ಪಂಗಡ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್, ಪ್ರಿಂಟರ್, ಪೆನ್ ಡ್ರೈವ್, ಬಿ.ಪಿ ಅಪರೇಟರ್, ಸ್ಟೆಥೋಸ್ಕೋಪ್ ಮತ್ತು ಇತರೆ ವೈದ್ಯಕೀಯ ಪರಿಕರಗಳನ್ನು ಟೆಂಡರ್ ಮೂಲಕ ಖರೀದಿಸಿ ವಿತರಿಸಲು ಅನುಮೋದನೆ ನೀಡಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| 3 | 2014–15ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ (SCSP/STSP) ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ರೋಗಿಗಳಿಗೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಬೋರ್‌ವೆಲ್ ಮತ್ತು ನೀರು ಎತ್ತುವ ಯಂತ್ರ ಅಳವಡಿಸುವ ಬಗ್ಗೆ. | 2014–15ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ (SCSP/STSP) ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ರೋಗಿಗಳಿಗೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಬೋರ್‌ವೆಲ್ ಮತ್ತು ನೀರು ಎತ್ತುವ ಯಂತ್ರ ಅಳವಡಿಸುವ ಸದರಿ ಪ್ರಸ್ತಾವನೆಯನ್ನು ಒಪ್ಪಿ ಈ ಸಂಬಂಧ ಏಕ ಕಡತದಲ್ಲಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ. ಬೆಂಗಳೂರು ರವರ ಮೂಲಕ ಸಮಾಜ ಕಲ್ಯಾಣ ಇಲಾಖೆಯ ಅನುಮೋದನೆ ಪಡೆಯಲು ಮತ್ತು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| 4 | ಹಿಮ್ಸ್ ಕೇಂದ್ರ ಗ್ರಂಥಾಲಯಕ್ಕೆ 2015–16ನೇ ಸಾಲಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿ ಸಲುವಾಗಿ, 50 ರಾಷ್ಟ್ರೀಯ ವೈದ್ಯಕೀಯ ನಿಯತಕಾಲಿಕೆಗಳು ಮತ್ತು 75 ಅಂತರಾಷ್ಟ್ರೀಯ ವೈದ್ಯಕೀಯ ನಿಯತಕಾಲಿಕೆಗಳನ್ನು ಸರಬರಾಜು ಪಡೆಯುವ ಬಗ್ಗೆ. | ಹಿಮ್ಸ್ ಕೇಂದ್ರ ಗ್ರಂಥಾಲಯಕ್ಕೆ 2015–16ನೇ ಸಾಲಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿ ಸಲುವಾಗಿ, 50 ರಾಷ್ಟ್ರೀಯ ವೈದ್ಯಕೀಯ ನಿಯತಕಾಲಿಕೆಗಳು ಮತ್ತು 75 ಅಂತರಾಷ್ಟ್ರೀಯ ವೈದ್ಯಕೀಯ ನಿಯತಕಾಲಿಕೆಗಳನ್ನು ಸರಬರಾಜು ಪಡೆಯುವುದರ ಬಗ್ಗೆ ಚರ್ಚಿಸಲಾಗಿ ಇ–ಟೆಂಡರ್ ಪ್ರಕ್ರಿಯೆ ಮೂಲಕ ಅತಿ ಹೆಚ್ಚು ರಿಯಾಯಿತಿ (highest discount) ದರದಲ್ಲಿ ನಮೂದಿಸಿರುವ ಸಂಸ್ಥೆಯ ಮೂಲಕ ಸರಬರಾಜು ಪಡೆಯಲು ಒಪ್ಪಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |

Finance Officer
Hassan Institute of Medical Sciences
Hassan

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 5 | ಹಿಮ್ಸ್ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕವಿರುವ ಬುಕ್ ರ್‍ಯಾಕ್ಸ್, ಜರ್ನಲ್ಸ್ ರ್‍ಯಾಕ್ಸ್, ಸುಡೆಂಟ್ಸ್ ಪ್ರಾಪರ್ಟಿ ರ್‍ಯಾಕ್ಸ್ ಮತ್ತು ಪುಸ್ತಕಗಳ ವಿತರಣಾ ಕೌಂಟರ್‌ಗಳನ್ನು ಖರೀದಿಸುವ ಬಗ್ಗೆ. | ಹಿಮ್ಸ್ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯಕವಿರುವ ಬುಕ್ ರ್‍ಯಾಕ್ಸ್, ಜರ್ನಲ್ಸ್ ರ್‍ಯಾಕ್ಸ್, ಸ್ಟುಡೆಂಟ್ಸ್ ಪ್ರಾಪರ್ಟಿ ರ್‍ಯಾಕ್ಸ್ ಮತ್ತು ಪುಸ್ತಕಗಳ ವಿತರಣಾ ಕೌಂಟರ್‌ಗಳನ್ನು ಖರೀದಿಸುವ ಬಗ್ಗೆ ಚರ್ಚಿಸಿ ಪ್ರಸ್ತಾವಿತ ಸಾಮಗ್ರಿಗಳನ್ನು ಆಸಕ್ತ ಬಿಡ್‌ದಾರರಿಂದ ಟೆಂಡರ್ ಕರೆದು ತಾಂತ್ರಿಕ ಬಿಡ್ ಪರಿಶೀಲನೆ ನಂತರ ಮಾದರಿ ಪ್ರಾತ್ಯಕ್ಷಿತೆಯಲ್ಲಿ ಉತ್ತಮ ಗುಣಮಟ್ಟದ ಬಿಡ್‌ದಾರರನ್ನು ಪ್ರಾತ್ಯಕ್ಷಿತೆ (demonstration comitee) ಸಮಿತಿಯ ಅನುಮೋದನೆ ಪಡೆದು ಅರ್ಹ ಬಿಡ್‌ದಾರರನ್ನು ಮಾತ್ರ ಅರ್ಥಿಕ ಬಿಡ್‌ಗೆ ಪರಿಗಣಿಸಿ ಸರಬರಾಜು ಪಡೆಯಲು ಕ್ರಮವಹಿಸಲು ತೀರ್ಮಾನಿಸಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| 6 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಶ್ರೀ. ಚಾಮರಾಜೇಂದ್ರ ಬೋಧಕ ಆಸ್ಪತ್ರೆಗೆ (ಹಳೆ ಕಟ್ಟಡ) ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಶ್ರೀ. ಚಾಮರಾಜೇಂದ್ರ ಬೋಧಕ ಆಸ್ಪತ್ರೆಗೆ (ಹಳೆ ಕಟ್ಟಡ) ಅಗ್ನಿಶಾಮಕ ಉಪಕರಣಗಳ ಅಳವಡಿಕೆಗಳ ಬಗ್ಗೆ ಚರ್ಚಿಸಿ ಈ ಸಂಬಂಧದ ವೆಚ್ಚವನ್ನು ಆಸ್ಪತ್ರೆ ಯೂಸರ್ಸ್ ಹಣದಿಂದ ಬರಿಸಲು ಮತ್ತು ಇ-ಟೆಂಡರ್ ಮೂಲಕ ಸರಬರಾಜು ಪಡೆಯಲು ಅನುಮೋದಿಸಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| 7 | 2015-16ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ ನಿಗದಿಯಾಗಿರುವ ಅನುದಾನ ಮತ್ತು ವೇತನಭತ್ಯೆ ಇತರೆ ಖರ್ಚು ವೆಚ್ಚಗಳನ್ನು ಭರಿಸುವ ಬಗ್ಗೆ. | ಹಿಮ್ಸ್ ಸಂಸ್ಥೆಗೆ 2015-16 ನೇ ಸಾಲಿನ ಯೋಜನೆ ಮತ್ತು ಯೋಜನೇತರ ಅನುದಾನದಲ್ಲಿ ಬಿಡುಗಡೆಯಾಗಿರುವ ವೆಚ್ಚ ಭರಿಸಲು ಅನುಮೋದಿಸಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |
| 8 | 7ನೇ ಕಾಮಗಾರಿ ಸಮಿತಿ ಸಭೆಯಲ್ಲಿ ವಿಷಯವಾರು ಚರ್ಚಿಸಿ ತೆಗೆದುಕೊಂಡ ನಿರ್ಣಯಗಳನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯುವ ಬಗ್ಗೆ. | ದಿ:05.06.2015 ರಂದು ನಡೆದ ಸಂಸ್ಥೆಯ 7ನೇ ಕಾಮಗಾರಿ ಸಮಿತಿ ಸಭೆಯಲ್ಲಿ ವಿಷಯವಾರು ಚರ್ಚಿಸಿ ತೆಗೆದುಕೊಂಡ ನಿರ್ಣಯಗಳನ್ನು ಆರ್ಥಿಕ ಸಮಿತಿ ಸಭೆ ಚರ್ಚಿಸಿ ಹಾಗೂ ಅನುಮೋದಿಸಿ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲು ತೀರ್ಮಾನಿಸಲಾಯಿತು. |

Finance Officer
Hassan Institute of Medical Sciences
Hassan

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 9 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**<br>ಆಸ್ಪತ್ರೆಯ ರೋಗಿಗಳಿಗೆ ಅವಶ್ಯಕವಿರುವ ಡ್ರೈ ಲೇಸರ್ ಫಿಲಂಗಳನ್ನು ಖರೀದಿಸುವ ಬಗ್ಗೆ | ಸಂಸ್ಥೆಯಲ್ಲಿ ಈಗಾಗಲೇ CR system ಮತ್ತು CT-Scan ಯಂತ್ರಗಳು ಕಾರ್ಯನಿರ್ವಹಿಸುತ್ತಿದ್ದು, ಡ್ರೈ ಲೇಸರ್ ಫಿಲಂಗಳು ಅವಶ್ಯಕವಾಗಿರುತ್ತದೆ. ಫಿಲಂಗಳ ಅಲಭ್ಯತೆಯಿಂದಾಗಿ CR system ಯಂತ್ರ ಸ್ಥಗಿತಗೊಳಿಸಲಾಗಿದ್ದು, ಈಗ ಡ್ರೈ ಲೇಸರ್ ಫಿಲಂಗಳನ್ನು ತುರ್ತಾಗಿ ಖರೀದಿಸಬೇಕಾಗಿದೆ. ಅದುದರಿಂದ ಒಂದು ವರ್ಷಕ್ಕೆ ಬೇಕಾಗಿರುವ ಫಿಲಂಗಳನ್ನು ಮಾತ್ರ ಖರೀದಿಸಲು ಒಪ್ಪಿ ಉಳಿದಂತೆ ಮುಂದಿನ ಮೂರು ಅಥವಾ ಐದು ವರ್ಷಗಳಿಗೆ ಬೇಕಾಗುವ ಫಿಲಂಗಳನ್ನು ಟೆಂಡರ್ ಮೂಲಕ ಖರೀದಿಸಲು ತೀರ್ಮಾನಿಸಿ ಮತ್ತು ಆಡಳಿತ ಮಂಡಳಿಯ ಅನುಮೋದನೆಗಾಗಿ ಮಂಡಿಸಲು ತೀರ್ಮಾನಿಸಲಾಯಿತು. |

ಆರ್ಥಿಕ ಅಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

05/06/2015

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

Director
ನಿರ್ದೇಶಕರು
Hassan Institute of Medical Sciences,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ವಿಕಾಸ ಸೌಧ,
ಬೆಂಗಳೂರು. ಹಾಗೂ ಅಧ್ಯಕ್ಷರು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

M. LAKSHMINARAYANA, IAS
Principal Secretary to Government
Health and Family Welfare Department
(Medical Education)